**ದಿನಾಂಕಃ 23.06.2025 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಪಿ.ಎಸ್ ವಕೀಲರಿಂದಃ**

ನಾನು ಚೆಕ್ ನ್ನು ಎರಡು ಮೂರು ಬಾರಿ ಬ್ಯಾಂಕ್ ಗೆ ನಗದೀಕರಣಗೊಳಿಸಲು ಸಲ್ಲಿಸಿರುತ್ತೇನೆ. ನಾನು ಮೊದಲ ಬಾರಿ ದಿನಾಂಕ.27.09.2017 ರಂದು ಚೆಕ್ ನ್ನು ಬ್ಯಾಂಕ್ ಗೆ ಸಲ್ಲಿಸಿದಾಗ, ಬ್ಯಾಂಕ್ ನವರು ಸದರಿ ಚೆಕ್ ನ ಖಾತೆಯು ಮುಚ್ಚಲಾಗಿದೆ ಎಂದು ಹಿಂಬರಹ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಅವರೇ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಿನಾಂಕ.27.09.2017 ರ ಹಿಂಬರಹದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುವುದನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದು, ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ನಿ.ಡಿ-1 ನ್ನು ಪಡೆದುಕೊಂಡ ನಂತರ ನನಗೆ ಆರೋಪಿಯ ವಿರುದ್ಧ ದೂರು ಕೊಡಲು ತೊಂದರೆ ಇರುವುದಿಲ್ಲ. ನೀವು ಸಲ್ಲಿಸಿರುವ ದೂರು ಕಾಲ ಪರಿಮಿತಿ ಮೀರಿದ್ದು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಆರೋಪಿ ಬಹಳ ವರ್ಷಗಳ ಹಿಂದೆ ಚೀಟಿ ವ್ಯವಹಾರದಲ್ಲಿ ಕೊಟ್ಟ ಚೆಕ್ ನ್ನು ದುರುಪಯೋಗಪಡಿಸಿಕೊಂಡು ನಾನು ಆರೋಪಿಯ ವಿರುದ್ಧ ಈ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನೊಂದಿಗೆ ಚೀಟಿ ವ್ಯವಹಾರದಲ್ಲಿ ಪಡೆದುಕೊಂಡ ಹಣವನ್ನು ಆರೋಪಿಯು ಬಹಳ ವರ್ಷಗಳ ಹಿಂದೆಯೇ ಹಿಂದಿರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಮತ್ತು ಅವರ ಹೆಂಡತಿಯಾದ ವೀಣಾ ಅವರಿಗೆ ತಲಾ ರೂ.5,00,000/- ಹಣವನ್ನು ಕೊಡುವಷ್ಟು ಶಕ್ತಿ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಬಿ.ಪಿ.ಎಲ್. ಕಾರ್ಡ್ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಬಳಿ ಇರುವ ಕಾರ್ಡ್ ಎ.ಪಿ.ಎಲ್. ಕಾರ್ಡ್ ಆಗಿರಬಹುದು ನನಗೆ ಈಗ ಹೇಳಲು ಗೊತ್ತಾಗುತ್ತಿಲ್ಲ ಎಂದು ಹೇಳುತ್ತಾರೆ. ನಾನು ಹೊಂದಿರುವ ಕಾರ್ಡ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಬಳಿ ರೂ.5,00,000/-

ಹಣವನ್ನು ಆರೋಪಿಗೆ ಕೊಡುವಷ್ಟು ಶಕ್ತಿ ಇಲ್ಲದಿದ್ದರೂ ಸಹ ನಾನು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್ ಹೆಚ್.ಆರ್)
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ತಿ.ನರಸೀಪುರ.